ಶ್ರೀ ಎಂ.ಮಹಾದೇವ (ರೇಷ್ಮೆ ಮತ್ತು ಜವಳಿ ಸಚಿವರು):-

ಅ) ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಕೆಹೆಚ್‌ಡಿಸಿ ಯಲ್ಲಿ ಮಿತವ್ಯಯನಿಧಿ ಯೋಜನೆ ಸ್ಥಾಪನೆಯಾದ ನಂತರ ನೇಕಾರರಿಗೆ 4,663 ಖಾತೆಗಳನ್ನು ಪ್ರಾರಂಭಿಸಲಾಗಿದೆ.

ಆ) ಈ ಯೋಜನೆಯ ಅವಧಿ 15 ವರ್ಷಗಳಾಗಿದ್ದು, ಈ ಯೋಜನೆಯಡಿ ಬಡ್ಡಿಗಾಗಿ 2000-01 ನೆ ಸಾಲಿನಲ್ಲಿ ರೂ.88, 66, 126, ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಮೊತ್ತದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರದ ಸಮಚಂದಾ ಹಣ 1999-2000ನೇ ಸಾಲಿನವರೆಗೆ ಬಂದಿರುತ್ತದೆ. 2000-01ನೇ ಸಾಲಿನ ಕೇಂದ್ರದ ಪಾಲು ರೂ.30.00 ಲಕ್ಷಗಳನ್ನು ರಾಜ್ಯದ ಪಾಲು ರೂ.30.00ಲಕ್ಷಗಳನ್ನು ಒಳಗೊಂಡು ರಾಜ್ಯ ಸರ್ಕಾರ ಒಟ್ಟು ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಆದಷ್ಟು ಬೇಗನೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

289 (459) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತುರುವೇಕೆರೆ ತಾಲ್ಲೂಕು ದೊಮ್ಮರನ ಹಳ್ಳಿಯಲ್ಲಿ ಗ್ರಾಮಾಂತರ ಪ್ರೌಢಶಾಲೆ ಇದ್ದು, ಬಹಳ ಹಿಂದುಳಿದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಿಂದುಳಿದ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಮಂಜೂರು ಮಾಡುವ ಕುರಿತು ಸರ್ಕಾರದ ನಿಲುವೇನು?

ಇ) ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ತುರುವೇಕೆರೆ ನಗರದ ಹೊರಹೊಲಯದಲಿ ವಾಸ ಮಾಡುವ ಗುಡಿಸಲು ವಾಸಿಗಳಿ ಸಾಮೂಹಿಕ ಶೌಚಾಲಯ ನಿರ್ಮಾಣ

290(450) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ. (ತುರುವೇಕೆರೆ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ನಗರದ ಕೆ.ಇ.ಬಿ. ಸ್ಟೇಷನ್ ಪಕ್ಕದಲ್ಲಿ ವಾಸವಾಗಿರುವ ಗುಡಿಸಲು ವಾಸಿಗಳಿಗೆ ಸಾಮೂಹಿಕ ಶೌಚಾಲಯ ಇಲ್ಲದೆ ತುಂಬಾ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಅ) ಶೌಚಾಲಯವನ್ನು ನಿರ್ಮಿಸಿಕೊಡುವಲ್ಲಿ ಸರ್ಕಾರದ ನಿಲುವೇನು?

ಇ) ಇನ್ನು ಎಷ್ಟು ದಿನಗಳಲ್ಲಿ ನಿರ್ಮಿಸಿ ಕೊಡಬಹುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :-

ಅ) ಬಂದಿದೆ.

ಆ) ತುರುವೇಕೆರೆ ಪಟ್ಟಣದ ಕೆ.ಇ.ಬಿ.ಸ್ಟೇಷನ್ ಪಕ್ಕದಲ್ಲಿ ಇರುವುದು ಹೊಸ ಬಡಾವಣೆಯಾಗಿದ್ದು, ಇಲ್ಲಿರುವ ಸರ್ಕಾರಿ ಮತ್ತು ಖಿರಾಬು ಜಾಗದಲ್ಲಿ ಅಕ್ರಮವಾಗಿ ಗುಡಿಸಲಗಳನ್ನು ಹಾಕಿಕೊಂಡಿರುತ್ತಾರೆ. ಸಾಮೂಹಿಕ ಶೌಚಾಲಯ ನಿರ್ಮಿಸಿದಲ್ಲಿ ಪ್ರತಿ ದಿನ ನೀರು ಸರಬರಾಜು ವ್ಯವಸ್ಥೆ ಮಾಡಬೇಕಾಗಿದ್ದು, ಇದು ಹೊಸ ಬಡಾವಣೆಯಾಗಿದ್ದು ಎಲ್ಲಾ ಭಾಗಕ್ಕೂ ನೀರು ಸರಬರಾಜಿನ ಪೈಪ್ ಲೈನ್ ಇರುವುದಿಲ್ಲವಾದ್ದರಿಂದ ಸದರಿ ಕಾಮಗಾರಿಯನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಲಾಗುವುದು.

ಇ) ಇನ್ನು 3 ತಿಂಗಳುಗಳಲ್ಲಿ ಶೌಚಾಲಯ ನಿರ್ಮಿಸಿ ಕೊಡಲು ಕ್ರಮ ಕೈಗೊಳ್ಳಲಾಗುವುದು.

ತುರುವೇಕೆರೆ ಪಟ್ಟಣದಲ್ಲಿ ರಸ್ತೆಗಳು ಹಾಳಾಗಿರುವುದು

291 (555) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ. (ತುರುವೇಕೆರೆ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುವ ಎಲ್ಲಾ ರಸ್ತೆಗಳು; ಹತ್ತಾರು ವರ್ಷಗಳಿಂದ ಡಾಂಬರೀಕರಣ ಹಾಗೂ ರಿಪೇರಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪಟ್ಟಣ ಪಂಚಾಯಿತಿ ಇದ್ದರೂ ಸಹ ಕೆಲಸ ಮಾಡದಿರಲು ಕಾರಣವೆನು?

ಇ) ಈಗಲಾದರೂ ರಸ್ತೆ ಕಾಮಗಾರಿಗಳನ್ನು ಮಾಡಲಾಗುವುದೇ ಅವುಗಳಲ್ಲಿ ಯಾವ ಯಾವ ರಸ್ತೆ ಕಾಮಗಾರಿ ತೆಗೆದು ಕೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):-

ಅ) ತುರುವೇಕೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವಾರು ರಸ್ತೆ ಮತ್ತು ಇತರೇ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹತ್ತನೇ ಹಣಕಾಸು ಯೋಜನೆಯಡಿ ರೂ. 10 ಲಕ್ಷಗಳು ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ ರೂ. 48,000 ಹಾಗೂ ಪಟ್ಟಣಪಂಚಾಯತಿಯ ಸಾಮಾನ್ಯ ಖಾತೆಯ ರೂ. 10.92 ಲಕ್ಷಗಳ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಅಗತ್ಯವಿರುವ ಸ್ಥಳಗಳಲ್ಲಿ ಕೈಗೊಳ್ಳಲಾಗಿದೆ. ಈ ಮೇಲೆ ಸೂಚಿಸಿದ ಕಾರ್ಯಕ್ರಮಗಳಡಿ ನಿರ್ವಹಿಸಿರುವ ಕೆಲಸಗಳ ವಿವರಗಳನ್ನು ನೀಡುವ ಪಟ್ಟಿಯನ್ನು ಲಗತ್ತಿಸಲಾಗಿದೆ (ಅನುಬಂಧ- 1)